# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :14 ಫ್ರಾ.ಸಾ. : 26**

ಸಾಕ್ಷಿಯ ಹೆಸರು : ಶಾನೂರು ಮಣಿಯಾರ್
ತಂದೆಯ ಹೆಸರು : ಉಸ್ಮಾನ್ ಮಣಿಯಾರ್
ವಯಸ್ಸು : 31 ವರ್ಷ
ಕೆಲಸ : ಸೆಂಟ್ರಿಂಗ್
ವಾಸ : ದಾಂಡೇಲಿ

**ದಿನಾಂಕಃ 16-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಸಾಕ್ಷಿಯು ನಿಪಿ-58 ನೋಟಿಸಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-58(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ, ಸಾಕ್ಷಿಯು ನಿಪಿ-59 ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-59 ಎಂದು, ಸಾಕ್ಷಿಯ ಸಹಿಯನ್ನು ನಿಪಿ-59(ಬಿ) ಎಂದು ಗುರುತಿಸಲಾಯಿತು. ಸುಮಾರು 6-7 ವರ್ಷಗಳ ಹಿಂದೆ ನಾನು ಮತ್ತು ನನ್ನ ದಾಯಾದಿ ಚಾಸಾ-13 ರವರು ದಾಂಡೇಲಿಯ ಮೃತ್ಯುಂಜಯ ಮಠದಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದು, ಚಹಾ ಕುಡಿಯಲು ಮಠದ ಮುಂದಿರುವ ಅಂಗಡಿಗೆ ಹೋಗಿದ್ದು, ಅಲ್ಲಿಗೆ ಪೊಲೀಸರು ಬಂದು ಜಂಗಲ್ ರೆಸಾರ್ಟ್ ಕಡೆಗೆ ಹೋಗುವ ರಸ್ತೆಯಲ್ಲಿ ನಮ್ಮನ್ನು ನಿಲ್ಲಿಸಿ, ಫೋಟೊ ತೆಗೆದು, ನಮ್ಮ ಸಹಿಯನ್ನು ಪಡೆದುಕೊಂಡರು. ಆದರೆ ಯಾವ ವಿಷಯಕ್ಕಾಗಿ ಸಹಿ ಪಡೆದು ಫೋಟೊ ತೆಗೆದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-60 ಮತ್ತು 61 ಫೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ತಾನು ಹಾಗೂ ತನ್ನ ದಾಯಾದಿ ಚಾಸಾ-13, ಪೊಲೀಸರು ಹಾಗೂ ಅವರೊಂದಿಗೆ ಬಂದಿದ್ದ

ಒಬ್ಬ ವ್ಯಕ್ತಿ ಇರುತ್ತಾನೆ ಎಂದು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ಫೋಟೊಗಳನ್ನು ಕೋಗಿಲ್ ಬನ್ ಗೆ ಹೋಗುವ ರಸ್ತೆಯಲ್ಲಿ ತೆಗೆಯಲಾಯಿತು ಎಂದು ನುಡಿಯುತ್ತಾನೆ. ಆದಿನ ಪೋಲಿಸರೊಂದಿಗೆ ಬಂದಿದ್ದ ವ್ಯಕ್ತಿಯನ್ನು ನನಗೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

2. ದಿನಾಂಕಃ 06-12-2018 ರಂದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಆದಿನ ಕಾರವಾರ ಪೊಲೀಸರು ದಾಂಡೇಲಿಯ ವೃತ್ತ ನಿರೀಕ್ಷಕರ ಕಚೇರಿಗೆ ಪಂಚನಾಮೆಗಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ನಾವು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಹೋದಾಗ ಅಲ್ಲಿ ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯು ಹಾಜರಿದ್ದು, ತನ್ನ ಹೆಸರು ರಿಜ್ವಾನ್ ಎಂದು ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ 1 ನೇ ಆರೋಪಿಯು ನಮ್ಮ ಸಮಕ್ಷಮ ಮೃತ ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಪೂರ್ವದಲ್ಲಿ ತಾನು ಹಾಗೂ 4 ನೇ ಆರೋಪಿ ನಿಖಿಲ್ ಕೂಡಿ ಕಾರವಾರದಿಂದ ವೋಕ್ಸವೇಗನ್ಸ್ ವೆಂಟೋ ಕಾರು ನಂ. ಕೆಎ-30/ಎಂ-7535 ನೇದನ್ನು ದಾಂಡೇಲಿಗೆ ಹೋಗಿ, ಅಲ್ಲಿ 2 ನೇ ಆರೋಪಿಯನ್ನು ಭೇಟಿಯಾಗಿ, ನಂತರ ನಾವು ಒಂದು ಸ್ಥಳದಲ್ಲಿ ಸೇರಿ ಪ್ರೇಮ್ ಕುಮಾರನನ್ನು ಯಾವ ರೀತಿ ಕೊಲೆ ಮಾಡಬೇಕೆಂದು ಸಂಚು ರೂಪಿಸಿರುತ್ತೇವೆ ಹಾಗೂ ನೀವು ನನ್ನ ಜೊತೆ ಬಂದರೆ ಸದರಿ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

3. ನಂತರ ಪೊಲೀಸರು ನಮ್ಮನ್ನು ಇಲಾಖೆಯ ಜೀಪಿನಲ್ಲಿ ಸಂಜೆ 5.15 ಗಂಟೆಗೆ ಹೊರಟು ಆರೋಪಿ ತೋರಿಸಿದಂತೆ, ಕುಳಗಿ ರಸ್ತೆಯಲ್ಲಿ ಹೋಗಿ, ಮೃತ್ಯುಂಜಯ ಮಠದ ಹತ್ತಿರ ತಲುಪಿದಾಗ, ಅಲ್ಲಿ 1 ನೇ ಆರೋಪಿಯು ಜೀಪನ್ನು ನಿಲ್ಲಿಸುವಂತೆ ಹೇಳಿದನು ಎಂದರೆ ನನಗೆ ಗೊತ್ತಿಲ್ಲ. ನಂತರ ಅಲ್ಲಿ 1 ನೇ ಆರೋಪಿಯು ಜೀಪಿನಿಂದ ಕೆಳಗೆ ಇಳಿದು, ಆತನು ಮುಂದೆ ನಡೆದುಕೊಂಡು ಹೋದಂತೆ ನಾವು ಆತನನ್ನು ಹಿಂಬಾಲಿಸಿಕೊಂಡು ಹೋಗಿದ್ದು, ಅಲ್ಲಿ 1 ನೇ ಆರೋಪಿಯು ಕಾಳಿ ಅಡ್ವೆಂಚರ್ ಜಂಗಲ್ ಲಾಡ್ಜ್ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿದ್ದ

ಒಂದು ಸಿಮೆಂಟ್ ಕಟ್ಟೆಯನ್ನು ತೋರಿಸಿ, ಇದೇ ಕಟ್ಟೆಯ ಬಳಿ ನಾನು ಹಾಗೂ 2 ನೇ ಆರೋಪಿಯು ಸೇರಿ ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿರುತ್ತೇವೆ ಎಂದು ತೋರಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

4. ಅಲ್ಲಿ 1 ನೇ ಆರೋಪಿಯು ಸ್ಥಳವನ್ನು ತೋರಿಸಿದ ಜಾಗದಲ್ಲಿ ಪೊಲೀಸರು ನಮ್ಮನ್ನು ನಿಲ್ಲಿಸಿ ಫೋಟೊ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸಹಿ ಮಾಡಿದ್ದು ಮಾತ್ರ ನನಗೆ ನೆನಪಿದೆ ಎಂದು ನುಡಿಯುತ್ತಾರೆ. ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿ, ಆನಂತರ 1 ನೇ ಆರೋಪಿ ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ಪೊಲೀಸರು ಯಾವ ಕಾರಣಕ್ಕಾಗಿ ಸಹಿಗಳನ್ನು ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆಯಲಾಗಿತ್ತು ಎಂದರೆ ಸಾಕ್ಷಿಯು, ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–60 ಮತ್ತು 61 ಫೋಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ. ಫೋಟೊದಲ್ಲಿ ಕಾಣುತ್ತಿರುವ ವ್ಯಕ್ತಿ ಯಾರು ಎಂದು ಹಾಗೂ ಯಾವಾಗ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

1 ನೇ ಆರೊಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
*Sd/-*
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.